ಕರ್ನಾಟಕ ವಿಧಾನ ಸಭೆ

ಸೋಮವಾರ, ದಿನಾಂಕ ೨೫ನೇ ಆಗಸ್ಟ್ ೧೯೮೬

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೧೧-೦೦ ಘಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಪೀಠವನ್ನಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಸಾಗರದಲ್ಲಿ ಮಹಿಳಾ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸಿರುವ ಬಗ್ಗೆ

೧೦೧ (೫೩೮) ಶ್ರೀ ಬಿ. ಧರ್ಮಪ್ಪ (ಸಾಗರ್).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

ಅ) ಕಳೆದ ಸಾಲಿನಲ್ಲಿಯೇ ಸಾಗರದಲ್ಲಿ ಒಂದು ಮಹಿಳಾ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸಬೇಕೆಂದು ಮನವಿಯನ್ನು ಸರ್ಕಾರಕ್ಕೆ ಕೊಟ್ಟಿದ್ದು, ಈ ಬಗ್ಗೆ ಸರ್ಕಾರದಿಂದ ಪರಿಶೀಲನೆಯೂ ನಡೆದು, ಕೊಡಬಹುದೆಂದು ಶಿಫಾರಸ್ಸನ್ನು ಸಹ ಸಂಬಂಧ ಪಟ್ಟವರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಸಾಲಿನಲ್ಲಿಯೇ ಈ ಕಾಲೇಜನ್ನು ಪ್ರಾರಂಭಿಸಲಾಗುವುದೇ ?

ಶ್ರೀ ಡಿ. ಮಂಜುನಾಥ್ (ವಿದ್ಯಾ ಸಚಿವರು).—

ಅ) ಹೌದು.

ಆ) ೧೯೮೬-೮೭ನೇ ಸಾಲಿನಲ್ಲಿ ಯಾವುದೇ ಸರ್ಕಾರಿ ಪ್ರಥಮದರ್ಜೆ ಕಾಲೇಜು ನೀಡಬಾರದೆಂದು ಸರ್ಕಾರವು ತೀರ್ಮಾನವನ್ನು ಕೈಗೊಂಡಿದೆ.

ಶ್ರೀ ಬಿ. ಧರ್ಮಪ್ಪ.—ಮಾನ್ಯ ಅಧ್ಯಕ್ಷರೇ, ಸಾಗರದಲ್ಲಿ ಈಗಾಗಲೇ ಇರುವ ಪ್ರಥಮ ದರ್ಜೆ ಕಾಲೇಜಿನಲ್ಲಿ ಪಿತಿಗಿಂತ ಹೆಚ್ಚಿಗೆ ವಿದ್ಯಾರ್ಥಿಗಳು ಇರುವುದರಿಂದ ಸಾಗರದಲ್ಲಿ ಮತ್ತೊಂದು ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭ ಮಾಡಬೇಕೆಂದು ಹೋದ ವರ್ಷವೇ ಮನವಿಯನ್ನು ಮಾಡಿಕೊಂಡಿದ್ದೆ. ಸರ್ಕಾರ ಈಗ ಉತ್ತರ ಕೊಟ್ಟಂತೆಯೇ ಹೋದ ವರ್ಷವೂ ಸಹ ಉತ್ತರ ಕೊಟ್ಟಿತ್ತು. ಆದರೆ ಕಾಲೇಜನ್ನು ಪ್ರಾರಂಭ ಮಾಡುವ ಬಗ್ಗೆ ಯಾವುದೇ ಕ್ರಮವನ್ನು ಇದುವರೆಗೆ ತೆಗೆದುಕೊಂಡಿಲ್ಲ. ನಮ್ಮ ಸಾಗರದಲ್ಲಿ ಈಗಾಗಲೇ ಪ್ರಥಮ ದರ್ಜೆ ಕಾಲೇಜಿದ್ದರೂ ಎಲ್ಲರಿಗೂ ಸ್ಥಳಾವಕಾಶವಾಗುವುದಿಲ್ಲ. ಸರ್ಕಾರದ ನಿಯಮವನ್ನು ಸ್ವಲ್ಪ ಸಡಿಲಿಸಿ ಸಾಗರದಲ್ಲಿ ಒಂದು ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ, ಈ ವರ್ಷದಲ್ಲಿ ಯಾವ ಕಾಲೇಜನ್ನು ಕೊಡಬಾರದೆಂದು ತೀರ್ಮಾನ ಮಾಡಲಾಗಿದೆ. ಸಾಗರದಲ್ಲಿ ಪ್ರಥಮ ದರ್ಜೆ ಕಾಲೇಜು ಅವಶ್ಯಕತೆ ಇದ್ದರೆ ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಕಾಲೇಜುಗಳನ್ನು ಕೊಡುವುದಿಲ್ಲ ಎಂದು ಸರ್ಕಾರದ ತೀರ್ಮಾನ ಇದೆ ಆದ್ದರಿಂದ ಕಾಲೇಜನ್ನು ಕೊಡುವುದಿಲ್ಲ ಎಂದರೆ ಹೇಗೆ ? ಅವಶ್ಯಕತೆ

ಇರುವ ಕಡೆಗಳಲ್ಲಿ ಏಕೆ ಕಾಲೇಜನ್ನು ಪ್ರಾರಂಭ ಮಾಡಬಾರದು ? ಇವರು ಅವಶ್ಯಕತೆಗಿಂತ ಹೆಚ್ಚಿಗೆ ಕಾಲೇಜುಗಳಿಗೆ ಪರವಾನಿಗೆಯನ್ನು ಮೊದಲೇ ಕೊಟ್ಟುಬಿಟ್ಟಿದ್ದರೆ, ಅವಶ್ಯಕತೆಗಿಂತ ಹೆಚ್ಚು ಕಾಲೇಜುಗಳನ್ನು ಏಕೆ ತೆಗೆಯಬೇಕಾಗಿತ್ತು ? ಎಲ್ಲಿ ಅವಶ್ಯಕತೆ ಇರುತ್ತದೆಯೋ ಅಲ್ಲಿ ಕಾಲೇಜುಗಳನ್ನು ತೆಗೆಯಬೇಕು.

ಶ್ರೀ ಡಿ. ಮಂಜುನಾಥ್.—ಸಾಗರದಲ್ಲಿ ಕಾಲೇಜು ತೆಗೆಯುವುದು ಅವಶ್ಯಕತೆ ಇದೆಯೋ ಇಲ್ಲವೋ ಎನ್ನುವುದನ್ನು ಪರಿಶೀಲನೆ ಮಾಡುತ್ತೇವೆಂದು ಆಗಲೇ ಹೇಳಿದ್ದೇನೆ.

ಕಾರವಾರದ ಬೈತಕೋಲದ ಹತ್ತಿರ ಸಮುದ್ರ ಕೆರೆಗಳ ಅಬ್ಬರದಿಂದ ಕೊರೆತ ಉಂಟಾಗಿರುವ ಬಗ್ಗೆ

೧೦೨ (೩೨೭) ಶ್ರೀ ಪ್ರಭಾಕರ ಎಸ್. ರಾಣೆ (ಕಾರವಾರ).—ಮಾನ್ಯ ಲೋಕೋಪಯೋಗಿ, ಕಾಡಾ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಕಳೆದ ಎರಡು ವರ್ಷಗಳಿಂದ ರಾಷ್ಟ್ರೀಯ ಹೆದ್ದಾರಿ ನಂಬರ್ ೧೭ಕ್ಕೆ ಕಾರವಾರದ ಬೈತಕೋಲದ ಹತ್ತಿರ ಸಮುದ್ರ ತೆರೆಗಳ ಅಬ್ಬರದಿಂದ ಕೊರೆತ ಉಂಟಾಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ಕೊರೆತವನ್ನು ತಡೆಯಲು ಸರ್ಕಾರದವರು ಕೈಗೊಂಡ ಕ್ರಮ ಏನು ?

ಇ) ಈ ಬಗ್ಗೆ ೧೯೫೫-೫೬ರ ಮತ್ತು ೧೯೫೬-೫೭ನೇ ಸಾಲುಗಳಲ್ಲಿ ಸರಕಾರದವರು ಮಾಡಿದ ವೆಚ್ಚವೆಷ್ಟು ?

ಈ) ಇದನ್ನು ಶಾಶ್ವತವಾಗಿ ತಡೆಯಲು ಸರಕಾರದವರು ಯಾವ ಕ್ರಮ ಕೈಗೊಳ್ಳಲು ನಿರ್ಣಯಿಸಿದ್ದಾರೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಸಚಿವರು).—

ಅ) ಬಂದಿದೆ.

ಆ) ತಾತ್ಕಾಲಿಕ ಕ್ರಮವಾಗಿ ಸಮುದ್ರ ಕೊರೆತವನ್ನು ತಡೆಯಲು ರಸ್ತೆಯ ಬದಿಯಲ್ಲಿ ದೊಡ್ಡ ದೊಡ್ಡ ಕಲ್ಲುಗಳನ್ನು ಹಾಕಲಾಗಿದೆ.

ಇ) ಮಾಡಿದ ವೆಚ್ಚ.—

೧೯೫೫-೫೬	೦.೯೨ ಲಕ್ಷ ರೂಪಾಯಿಗಳು.
೧೯೫೬-೫೭ (ಜುಲೈ ೫೬ರ ವರೆಗೆ)	೦.೩೯ ,,

ಈ) ಸಿ. ಡಬ್ಲ್ಯೂ. ಪಿ. ಆರ್, ಎಸ್, ಪುಣೆ, ಕೆ. ಇ. ಆರ್. ಎಸ್. ಮತ್ತು ಇತರ ತಾಂತ್ರಿಕ ತಜ್ಞರು ಸ್ಥಳ ಪರಿಶೀಲನೆ ನಡೆಸಿದ್ದಾರೆ. ಅವರ ವರದಿ ಬಂದಮೇಲೆ ಮುಂದಿನ ಕ್ರಮ ತೆಗೆದು ಕೊಳ್ಳಲಾಗುವುದು.

ಶ್ರೀ ಪ್ರಭಾಕರ್ ಎಸ್. ರಾಣೆ.—ಮಾನ್ಯ ಅಧ್ಯಕ್ಷರೇ, ನಾನು ಈ ಪ್ರಶ್ನೆಯನ್ನು ಕೇಳಿದಂಥ ಉದ್ದೇಶ ಏನೆಂದರೆ, ಸಮುದ್ರ ಕೊರೆತದಿಂದ ರಾಷ್ಟ್ರೀಯ ಹೆದ್ದಾರಿಗೆ ತೊಂದರೆಯುಂಟಾಗುತ್ತಿದೆ. ಈ ಕೊರೆತವನ್ನು ಶಾಶ್ವತವಾಗಿ ತಡೆಗಟ್ಟಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ಕೇಳಿದ್ದೇನೆ. ಆದರೆ ಇಲ್ಲಿ ಉತ್ತರ ಸ್ಪಷ್ಟವಾಗಿ ಬಂದಿಲ್ಲ. ಇವರ ಉತ್ತರದಲ್ಲಿ, ಕಳೆದ ೨-೩ ವರ್ಷಗಳಿಂದ ಕೊರೆತ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆಂದು ಹೇಳಿದ್ದಾರೆ. ಈ ಕೊರೆತವನ್ನು ತಡೆಗಟ್ಟುವ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಲು ತಾಂತ್ರಿಕ ತಜ್ಞರು ಸ್ಥಳ ಪರಿಶೀಲನೆ ಮಾಡಿದ್ದಾರೆಂದು ಹೇಳಿದ್ದಾರೆ. ಕಳೆದ ೨-೩ ವರ್ಷಗಳಿಂದ ಆದಂಥ ಕೊರೆತಕ್ಕೆ ಶಾಶ್ವತ ಪರಿಹಾರ ಕಂಡುಹಿಡಿಯಲಿಕ್ಕೆ, ತಜ್ಞರು ಸ್ಥಳ ಪರಿಶೀಲನೆ ನಡೆಸಿ, ನಂತರ ಇಂತಿಷ್ಟು ಕಾಲಾವಕಾಶದಲ್ಲಿಯೇ ಒಂದು ವರದಿಯನ್ನು ಸಲ್ಲಿಸುವಂತೆ ಸರ್ಕಾರ ಆದೇಶ ನೀಡಿದೆಯೇ ? ಇದಕ್ಕೆ ಸ್ಪಷ್ಟವಾಗಿ ಉತ್ತರ ಕೊಡಬೇಕು.